## ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ , ಕಾರವಾರ

ಸಿ.ಸಿ. ನಂಃ 992/2023 ಪಿ.ಡಬ್ಲ್ಯೂಃ 2

ಸಿಡಬ್ಲೂಃ 2

ಸಾಕ್ಷಿದಾರರ ಹೆಸರು : ಪ್ರವೀಣಕುಮಾರ

ತಂದೆಯ ಹೆಸರು : ಮುತ್ತಪ್ಪ ಕಲ್ಲೊಳ್ಳಿ

ವಯಸ್ಸು : 35 ವರ್ಷ

ಉದ್ಯೋಗ : ಅಬಕಾರಿ ಪೇದೆ , ಕಾರವಾರ ವಲಯ

ವಾಸ್ತವ್ಯ : ಕಾರವಾರ

ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕಃ 03-02-2024

**ಮುಖ್ಯ ವಿಚಾರಣೆಃ ಎ ಪಿ ಪಿ ಯವರಿಂದಃ**

ನಾನು ಸೆಪ್ಟಂಬರ 2019 ರಿಂದ ಇಲ್ಲಿಯವರೆಗೂ ಅಬಕಾರಿ ಪೇದೆಯಾಗಿ ಕಾರವಾರ ವಲಯದಲ್ಲಿ ಕೆಲಸ ಮಾಡುತ್ತಿದ್ದೇನೆ.

2. ದಿನಾಂಕಃ 21.03.2023 ನಾನು, ಚಾಸಾ.1 ಮತ್ತು 3 ರವರೊಂದಿಗೆ ಕಚೇರಿಯಿಂದ ಹೊರಟು ಬೆಳಿಗ್ಗೆ 9.00 ಗಂಟೆಗೆ ಹೊಟೇಗಾಳಿ ಗ್ರಾಮದ ಭೀಮಕೋಲ ಡ್ಯಾಮ ಹತ್ತಿರ ಅರಣ್ಯ ಪ್ರದೇಶದಲ್ಲಿ ಗಸ್ತುಕರ್ತವ್ಯದಲ್ಲಿದ್ದಾಗ ಚಾಸಾ.1 ರವರಿಗೆ ಬೆಳಿಗ್ಗೆ 9.20 ಗಂಟೆಗೆ ಬಾತ್ಮಿದಾರರೊಬ್ಬರು ಕರೆ ಮಾಡಿ ಮನೋಜ ಸುರೇಶ ಕೋಳಂಬಕರ ಎನ್ನುವ ವ್ಯಕ್ತಿ ಅಕ್ರಮವಾಗಿ ಗೋವಾ ಮದ್ಯವನ್ನು ಅಕ್ರಮವಾಗಿ ಸಾಗಾಟ ಮಾಡುತ್ತಿರುವ ಬಗ್ಗೆ ಮಾಹಿತಿ ಬಂದಿತು. ಸದರಿ ಸಮಯಕ್ಕೆ ಒಬ್ಬ ವ್ಯಕ್ತಿ ನಮ್ಮನ್ನು ನೋಡಿ ಓಡಿ ಹೋಗಲು ಪ್ರಯತ್ನಿಸಿದ್ದು , ನಾವು ಅವನನ್ನು ಬೆನ್ನಟ್ಟಿ ಹಿಡಿದೆವು. ಅವನ ಹೆಸರನ್ನು ವಿಚಾರಿಸಲಾಗಿ ತನ್ನ ಹೆಸರು ಮನೋಜ ಸುರೇಶ ಕೋಳಂಬಕರ, 35 ವರ್ಷ , ಸಾಃ ಬಾಮನವಾಡಾ, ಹೊಟೇಗಾಳಿ ಎಂದು ತಿಳಿಸಿದನು. ಸದರಿ ವ್ಯಕ್ತಿಯನ್ನು ಹಿಡಿದುಕೊಂಡು ನಾವು ಸ್ವಲ್ಪ ಮುಂದೆ ಹೋದಾಗ ಅಲ್ಲಿ 4 ಚೀಲಗಳು ಇರುವುದು ಕಂಡು ಬಂದಿತು. ಸದರಿ ಚೀಲಗಳು ಯಾರಿಗೆ ಸಂಬಂಧಿಸಿರುತ್ತವೆ ಎಂದು ಕೇಳಲಾಗಿ ಮನೋಜ ಸುರೇಶ ಕೋಳಂಬರಕರ ಆ ಚೀಲಗಳು ತನಗೆ ಸಂಬಂಧಿಸಿದ್ದು ಎಂದು ಹೇಳಿದನು. ಸದರಿ ಚೀಲದಲ್ಲಿ ಗೋವಾ ರಾಜ್ಯದ ಸರಾಯಿ ಇರುವುದು ಕಂಡು ಬಂದಿತು. ಇವುಗಳನ್ನು ಮಾರಾಟ ಮಾಡುವ ಉದ್ದೇಶದಿಂದ ಸಾಗಾಟ ಮಾಡುತ್ತಿರುವುದಾಗಿ ತಿಳಿಸಿದನು. ಅವನ ಬಳಿ ಯಾವುದೇ ಪಾಸ್ / ಪರ್ಮಿಟ ಕಂಡು ಬರಲಿಲ್ಲಾ. ಸದರಿ ಚೀಲಗಳನ್ನು ಪರಿಶೀಲಿಸುವ ಸಲುವಾಗಿ ಸುತ್ತಮುತ್ತಲು ಯಾರಾದರೂ ಪಂಚರಿದ್ದಾರೆಯೇ ಎಂದು

ನೋಡಲಾಗಿ ಸುತ್ತಲಿನಲ್ಲಿ ಅರಣ್ಯ ಪ್ರದೇಶವಾಗಿದ್ದರಿಂದ ಜನರು ಯಾರೂ ಸಿಗಲಿಲ್ಲಾ. ಆದ ಕಾರಣ ಚಾಸಾ.1 ರವರು ಭೀಮಕೋಲ ಮತ್ತು ಹೊಟೆಗಾಳಿ ಗ್ರಾಮದ ಜನರಿಗೆ ಪಂಚರಾಗಿ ಸಹಕರಿಸಲು ಕೋರಿದಾಗ ಅವರು ಒಪ್ಪಲಿಲ್ಲಾ. ನಂತರ ಚಾಸಾ.1 ರವರು ನನಗೆ ಮತ್ತು ಚಾಸಾ.3 ರವರಿಗೆ ಪಂಚರಾಗಿ ಸಹಕರಿಸಲು ಕೋರಿ ನೋಟೀಸು ನೀಡಿದ್ದು , ನಾವು ಪಂಚರಾಗಲು ಒಪ್ಪಿ , ಪರಸ್ಪರ ಅಂಗಜಪ್ತಿ ಮಾಡಿಕೊಂಡೆವು. ನಂತರ ಚಾಸಾ.1 ರವರು ನ್ಯಾಯಾಲಯದಿಂದ ಸರ್ಚ ವಾರಂಟ ಪಡೆಯಲು ಸಮಯಾವಕಾಶ ಇಲ್ಲದಿರುವ ಕಾರಣ ಸ್ಥಳದಲ್ಲೇ ಕ.ಅ.ಕಾಯ್ದೆ ಕಲಂ 54 ರ ಅಡಿಯಲ್ಲಿ ಶೋಧನಾ ಸಮ್ಮುಚಿತ ಪತ್ರವನ್ನು ತಯಾರಿಸಿದರು.

3. ನಂತರ ಪಂಚರ ಸಮಕ್ಷಮ ಚೀಲಗಳನ್ನು ಸವಿಸ್ತಾರವಾಗಿ ಪರಿಶೀಲಿಸಿ ನೋಡಲಾಗಿ , ಸದರಿ ಚೀಲಗಳು ಬಿಳಿ ಬಣ್ಣದ್ದಾಗಿದ್ದು , 1 ನೇ ಚೀಲದಲ್ಲಿ 750 ಎಂ ಎಲ್ ನ ರಿಯಲ ವಿಸ್ಕಿ –36 ಬಾಟಲುಗಳು, 2 ನೇ ಚೀಲದಲ್ಲಿ 750 ಎಂ ಎಲ್ ನ ಲೈಟಹಾರ್ಸ ವಿಸ್ಕಿ –36 ಬಾಟಲುಗಳು, 3 ನೇ ಚೀಲದಲ್ಲಿ 750 ಎಂ ಎಲ್ ನ ಮೆಕಡವಲ್ಸ ನಂ.1 –24 ಬಾಟಲುಗಳು ಮತ್ತು 4 ನೇ ಚೀಲದಲ್ಲಿ 180 ಎಂ ಎಲ್ ನ ಮೆಕಡವಲ್ಸ ನಂ.1 – 96 ಬಾಟಲುಗಳು ಇರುವುದು ಕಂಡು ಬಂದಿತು. ಇವುಗಳ ಮೇಲೆ for sale in Goa only ಎಂದು ನಮೂದು ಇರುವುದು ಕಂಡು ಬಂದಿತು.

4. ನಂತರ ರಾಸಾಯನಿಕ ಪರೀಕ್ಷೆಗೋಸ್ಕರ ಪ್ರತಿಯೊಂದು ಚೀಲದಿಂದ 4 ರಂತೆ ಒಟ್ಟು 16 ಬಾಟಲುಗಳನ್ನು ತೆಗೆದು ಅವುಗಳ ಮೇಲೆ ಬಟ್ಟೆ ಸುತ್ತಿ, ದಾರ ಕಟ್ಟಿ ಸೀಲ್ ಮಾಡಿ ನಮ್ಮ ಸಹಿ ಇರುವ ಮಾದರಿ ಚೀಟಿ ಅಂಟಿಸಿ ಪಂಚನಾಮೆಯನ್ನು ಮಾಡಲಾಯಿತು. ಪಂಚನಾಮೆಯನ್ನು 9.30 ರಿಂದ 10.30 ರ ವರೆಗೆ ಮಾಡಿ ಮುಗಿಸಲಾಯಿತು. ನಂತರ ಆರೋಪಿಯನ್ನು ಮತ್ತು ಎಲ್ಲಾ ಮು ಮಾ ಗಳನ್ನು ಕಚೇರಿಗೆ ತಂದು ಆರೋಪಿಯ ವಿರುದ್ಧ ಸರಕಾರದ ಪರವಾಗಿ ಪ್ರಕರಣ ದಾಖಲಿಸಲಾಯಿತು. ದಾಳಿಯ ಕಾಲಕ್ಕೆ ಚಾಸಾ.1 ರವರಿಗೆ ಅಗತ್ಯ ಸಹಾಯ ಮಾಡಿರುತ್ತೇನೆ. ಪಂಚನಾಮೆಯನ್ನು ನಾನೇ ಬರೆದಿರುತ್ತೇನೆ.

5. ದಿನಾಂಕಃ 24.03.2023 ರಂದು ಚಾಸಾ.5 ರವರಿಗೆ ಘಟನಾ ಸ್ಥಳದ ಹೇಳಿಕೆಯನ್ನು ನೀಡಿರುತ್ತೇನೆ. ದಿನಾಂಕಃ 20.06.2023 ರಂದು ರಾಸಾಯನಿಕ ಪರೀಕ್ಷೆಗಾಗಿ ಈ ಪ್ರಕರಣದಲ್ಲಿ ವಶಪಡಿಸಿಕೊಂಡ ಮುಮಾಗಳನ್ನು ಧಾರವಾಡಕ್ಕೆ ತೆಗೆದುಕೊಂಡು ಹೋಗಿದ್ದು , ದಿನಾಂಕಃ 01.07.2023 ರಂದು ರಾಸಾಯನಿಕ ಪರೀಕ್ಷಾ ವರದಿ ಮತ್ತು ಮು ಮಾ ಗಳನ್ನು ತಂದು ಚಾಸಾ.5 ರವರಿಗೆ ಹಸ್ತಾಂತರಿಸಿರುತ್ತೇನೆ. ಅದೇ ದಿನದಂದು ರಾಸಾಯನಿಕ ಪರೀಕ್ಷಾ ವರದಿ ತಂದು ಹಸ್ತಾಂತರಿಸಿದ ಬಗ್ಗೆ ಚಾಸಾ.5 ರವರಿಗೆ ಹೇಳಿಕೆ ನೀಡಿರುತ್ತೇನೆ.

6. ಈಗ ನ್ಯಾಯಾಲಯದ ಮುಂದಿರುವ ನಿಪಿ.1, 2, 3 ಮತ್ತು 7 ನ್ನು ನೋಡಿ ಗುರುತಿಸುತ್ತೇನೆ. ಅವುಗಳಲ್ಲಿರುವ ಸಹಿ ನನ್ನದೇ ಆಗಿದ್ದು , ನನ್ನ ಸಹಿಗಳನ್ನು ಅನುಕ್ರಮವಾಗಿ ನಿಪಿ.1 ಬಿ ರಿಂದ ನಿಪಿ.3 ಬಿ ಮತ್ತು ನಿಪಿ.7 ಬಿ ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಆರೋಪಿ ಮತ್ತು ಮು ಮಾ ಗಳನ್ನು ನೋಡಿ ಗುರುತಿಸುತ್ತೇನೆ. ನ್ಯಾಯಾಲಯದ ಮುಂದಿರುವ ಮು ಮಾ 1 ರಿಂದ 16 ಗಳನ್ನು ನೋಡಿ ಗುರುತಿಸುತ್ತೇನೆ. ಅವುಗಳ ಮೇಲಿರುವ ನನ್ನ ಸಹಿಯನ್ನು ಮು ಮಾ 1 ಬಿ ರಿಂದ ಮು ಮಾ 16 ಬಿ ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ ಎಸ್ ಪಿ ಜಿ ಆರೋಪಿ ಪರ ವಕೀಲರಿಂದ**

**7.** ಸದರಿ ದಿನದಂದು ದಾಳಿಯ ಸಲುವಾಗಿ ನಾನು ಭೀಮಕೋಲ ಪ್ರದೇಶಕ್ಕೆ ಹೋಗಿದ್ದರ ಬಗ್ಗೆ ತನಿಖಾಧಿಕಾರಿಗೆ ಯಾವುದೇ ದಾಖಲೆಯನ್ನು ನೀಡಿರುವುದಿಲ್ಲಾ ಎಂದರೆ ಸರಿ. ಸರಾಯಿ ಚೀಲಗಳು ಸಿಕ್ಕ ಜಾಗದ ಸರ್ವೇ ನಂಬರ ನನಗೆ ತಿಳಿದಿರುತ್ತದೆಯೇ ಎಂದರೆ ತನಿಖಾಧಿಕಾರಿಗೆ ತಿಳಿದಿರುತ್ತದೆ. ನನ್ನ ತಳುವಳಿಕೆ ಪ್ರಕಾರ ಘಟನಾ ಸ್ಥಳ ಎಂದು ಹೇಳಲಾದ ಜಾಗ ಅರಣ್ಯ ಪ್ರದೇಶ ಎಂದರೆ ಇರಬಹುದು. ಸರ್ಚವಾರಂಟನ್ನು ಪೂರ್ತಿಯಾಗಿ ಕೈಯಿಂದ ಬರೆಯಲಾಗಿರುತ್ತದೆ. ಚಾಸಾ.1 ರವರು ಹೇಳಿದಂತೆ ನಾನು ಸರ್ಚ ವಾರಂಟ ಬರೆದಿರುತ್ತೇನೆ. ಅದಕ್ಕೆ ನಾನು ಸಹಿ ಮಾಡಿರುತ್ತೇನೆ. ಚಾಸಾ.1 ರವರು ಜನರಿಗೆ ಪಂಚರಾಗುವಂತೆ ಕೋರಲು ಸುತ್ತಲಿನ ಗ್ರಾಮಗಳಿಗೆ ಹೋಗಿದ್ದರು. ಚಾಸಾ.1 ರವರು ಸುತ್ತಲಿನ ಗ್ರಾಮಗಳಿಗೆ ಹೋದಾಗ ಸಾರಾಯಿ ಬಾಟಲುಗಳು ನಮ್ಮ ಕಬ್ಜೆಯಲ್ಲಿ ಇತ್ತು ಎಂದರೆ ಸರಿ. ಸರಾಯಿ ಬಾಟಲುಗಳನ್ನು ಯಾವ ಕಂಪನಿ ತಯಾರು ಮಾಡಿರುತ್ತದೆ ಎಂದು ನಾನು ನೋಡಿರುವುದಿಲ್ಲಾ. 2023 ನೇ ಸಾಲಿನಲ್ಲಿ ನಾನು 15 ಪ್ರಕರಣಗಳಲ್ಲಿ ಸಾಕ್ಷಿ ನುಡಿದಿದ್ದೇನೆ ಎಂದರೆ 3 –4 ಪ್ರಕರಣಗಳಲ್ಲಿ ಸಾಕ್ಷಿ ನುಡಿದಿರಬಹುದು. ಆರೋಪಿಯನ್ನು ನಾವು ಜಂಗಲನಲ್ಲಿ ಹಿಡಿದಿರುವುದಿಲ್ಲಾ ಮತ್ತು ಅವನು ಚೀಲಗಳನ್ನು ತೋರಿಸಿರುವುದಿಲ್ಲಾ ಎಂದರೆ ಸರಿಯಲ್ಲ. ಈಗ ನ್ಯಾಯಾಲಯದ ಮುಂದೆ ಚೀಲಗಳು ಇರುವುದಿಲ್ಲಾ ಎಂದರೆ ಸರಿ. ಸರಾಯಿ ಬಾಟಲುಗಳ ಮುಚ್ಚಳವನ್ನು ತೆಗೆದು ವಾಸನೆಯನ್ನು ನೋಡಿರುವುದಿಲ್ಲಾ. ಚಾಸಾ.1 ನನ್ನ ಮೇಲಾಧಿಕಾರಿ ಎಂದರೆ ಸರಿ.

8. ನಾವು ಘಟನಾ ಸ್ಥಳಕ್ಕೆ ಹೋಗಿರುವುದಿಲ್ಲಾ ಮತ್ತು ಜಂಗಲ್ ನಲ್ಲಿ ಆರೋಪಿ ಸಿಕ್ಕಿರುವುದಿಲ್ಲಾ ಎಂದರೆ ಸರಿಯಲ್ಲ. ಘಟನಾ ಸ್ಥಳದಿಂದ ಯಾವುದೇ ಮು ಮಾ ಗಳನ್ನು ವಶಪಡಿಸಿಕೊಂಡಿಲ್ಲಾ ಎಂದರೆ ಸರಿಯಲ್ಲ. ಮು ಮಾ ಗಳಿಗೂ, ಆರೋಪಿಗೂ ಮತ್ತು ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲಾ ಎಂದರೆ ಸರಿಯಲ್ಲ. ಆರೋಪಿತನ ವಿರುದ್ಧ ಸುಳ್ಳು ದೂರು ದಾಖಲಿಸಲಾಗಿದೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ಯಾವುದೇ ಪಂಚನಾಮೆ ಮಾಡಿಲ್ಲಾ ಎಂದರೆ ಸರಿಯಲ್ಲ. ನಮ್ಮ ಠಾಣೆಯಲ್ಲಿದ್ದ ವಾರಸುದಾರರಿಲ್ಲದ ಮು

ಮಾ ಗಳನ್ನು ಬಳಸಿಕೊಂಡು ಆರೋಪಿ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಲಾಗಿದೆ ಎಂದರೆ ಸರಿಯಲ್ಲ. ಚಾಸಾ. 1 ರವರ ಮಾತಿನ ಮೇರೆಗೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: – ಇಲ್ಲಾ –**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತ ಮಾಡಿಸಲಾಯಿತು.

ಓ. ಹೇ.ಕೇ. ಸರಿ ಇದೆ.

**ಪ್ರ.ದ.ನ್ಯಾದಂ. ಕಾರವಾರ**